ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 04-03-2021 ಪ್ರಶ್ನೆ ಸಂಖ್ಯೆ : 522 (623)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಸಿ. ಎಂ. ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 04-03-2021

ಉತ್ತರಿಸುವ ಸಚಿವರು: ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ವಿಷಯ : ಅಮಾನತ್ ಬ್ಯಾಂಕ್ ಅಕ್ರಮ ಹಾಗೂ ಐಎಂಎ ಹಗರಣದ ಬಗ್ಗೆ

(ಅ) ಅಮಾನತ್ ಬ್ಯಾಂಕ್ ಅಕ್ರಮದ ತನಿಖೆಯು ಯಾವ ಹಂತದಲ್ಲಿದೆ; ಮತ್ತು ಇದುವರೆಗೂ ಯಾರ್ಯಾರ ಮೇಲೆ ಕೇಸ್ ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ಒದಗಿಸುವುದು)

(ಆ) ಅಮಾನತ್ ಬ್ಯಾಂಕ್ ಅಕ್ರಮದಲ್ಲಿ ಈವರೆಗೂ ಒಟ್ಟಾರೆ recovery ಮಾಡಿದ ಆಸ್ತಿ/ಹಣವೆಷ್ಟು; ಖಾತೆದಾರರಿಗೆ ಪಾವತಿ ಮಾಡಬೇಕಾದ ಮೊತ್ತ ಎಷ್ಟು; (ಸಂಪೂರ್ಣ ಅಂಕಿ-ಅಂಶಗಳನ್ನು ಒದಗಿಸುವುದು)

(ಇ) ಅಮಾನತ್ ಬ್ಯಾಂಕ್ ಅಕ್ರಮ ತನಿಖೆಯ ನಿಧಾನಗತಿಗೆ ಕಾರಣಗಳೇನು;

(ಈ) IMA, AMBIDANT & INJAZ ಹಗರಣದಲ್ಲಿ ಈವರೆಗೂ ಒಟ್ಟಾರೆ ಎಷ್ಟು ಹಣವನ್ನು recovery ಮಾಡಲಾಗಿದೆ; ವಂಚನೆಗೆ ಒಳಗಾದ ಠೇವಣಿದಾರರಿಗೆ ಮರು ಪಾವತಿ ಮಾಡಬೇಕಾದ ಹಣವೆಷ್ಟು; (ಅಂಕಿ-ಅಂಶಗಳ ಸಹಿತ ಸಂಪೂರ್ಣ ಮಾಹಿತಿ ಒದಗಿಸುವುದು)

(ಉ) IMA, AMBIDANT & INJAZ ಪ್ರಕರಣದಲ್ಲಿ ಇಲ್ಲಿಯವರೆಗೆ ಯಾರ್ಯಾರ ಮೇಲೆ ಕ್ರಮಕೈಗೊಳ್ಳಲಾಗಿದೆ; ಇದರಲ್ಲಿ ರಾಜಕಾರಣಿಗಳ ಹೆಸರುಗಳು ಕೇಳಿ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?